1	2	3
18.	ಕಾರವಾರ ಜಿಲ್ಲೆ	1997
19.	ಕೊಪ್ಪಳ ಜಿಲ್ಲೆ	1997–98
20.	ಮೈಸೂರು ಜಿಲ್ಲೆ	1997
21.	ಮಂಗಳೂರು ಜಿಲ್ಲೆ	1985
22.	ಮಂಡ್ಯ ಜಿಲ್ಲೆ	1995
23.	ಮಡಿಕೇರಿ ಜಿಲ್ಲೆ	1999
24.	ರಾಯಚೂರು ಜಿಲ್ಲೆ	1998
25.	ಶಿವಮೊಗ್ಗ ಜಿಲ್ಲೆ	1986
26.	ತುಮಕೂರು ಜಿಲ್ಲೆ	1981
27.	ಉಡುಪಿ ಜಿಲ್ಲೆ	1997–98

ತುಂಗಭದ್ರಾ ಯೋಜನೆಯ ಎಡದಂಡೆ ನಾಲೆಯ ಕಾಮಗಾರಿ ಕುರಿತು

4227 (4844) : ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಂಗಭದ್ರ ಯೋಜನೆಯ ಎಡದಂಡೆ ನಾಲೆಯ 109 ಮೈಲಿ ಬಳಿ ಕಾಮಗಾರಿಗೆ ಮಾಡಲಾದ ಅಂದಾಜು ವೆಚ್ಚ ಎಷ್ಟು;

ಆ) ತಾಂತ್ರಿಕ ಮಂಜೂರಾತಿ ಇಲ್ಲದೆ ಈ ಕಾಮಗಾರಿ ನಿರ್ವಹಿಸಲು ತೀರ್ಮಾನ ತೆಗೆದುಕೊಂಡವರು ಯಾರು;

ಇ) ಈ ಕಾಮಗಾರಿಯನ್ನು ನೇರವಾಗಿ ಒಪ್ಪಿಸಿದ ಕಾರಣ ಉಂಟಾದ ನಷ್ಟ ಎಷ್ಟು; ಇದನ್ನು ಹೇಗೆ ವಸೂಲಿ ಮಾಡಲಾಗಿದೆ;

ಈ) ಸರ್ಕಾರವು ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಶ್ರೀ ಎಚ್. ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ತುಂಗಭದ್ರಾ ಎಡದಂಡೆ ಕಾಲುವೆ ಮೈಲು 109 ರಲ್ಲಿ ಸಮತೋಲನಾ ಜಲಾಶಯದ ಕಾಮಗಾರಿಗೆ ಈವರೆಗೆ ರೂ. 39.68 ಕೋಟಿ ವೆಚ್ಚ ಮಾಡಲಾಗಿದ್ದು, ಇದರಲ್ಲಿ ರೂ. 15.15 ಕೋಟಿಗಳನ್ನು ಭೂ ಸ್ವಾಧೀನ ಪ್ರಕ್ರಿಯೆಗೆ ವಿನಿಯೋಗಿಸಲಾಗಿದೆ.

ಇ) ಈ ಕಾಮಗಾರಿ ಮತ್ತು ತುಂಗಭದ್ರಾ ಎಡದಂಡೆ ಕಾಲುವೆಯ ಆಧುನೀಕರಣ ಕಾಮಗಾರಿಗೆ ತಾಂತ್ರಿಕ ಸಲಹಾ ಸಮಿತಿಯ ಶಿಫಾರಸ್ಸಿನ ಮೇರೆಗೆ, ದಿನಾಂಕ: 5–6–1996ರಲ್ಲಿ ಆಡಳಿತಾತ್ಮಕ-

ಮಂಜೂರಾತಿ ನೀಡಿದ್ದು, ನಂತರ 1998ರಲ್ಲಿ ಮುಖ್ಯ ಇಂಜಿನಿಯರ್, ತುಂಗಭದ್ರಾ ಯೋಜನಾ ವಲಯ, ಮುನಿರಾಬಾದ್ ಇವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ) ಸದರಿ ಕಾಮಗಾರಿಯನ್ನು ಸರ್ಕಾರದ ಆದೇಶದಲ್ಲಿ ಸೂಚಿಸಿದ ಗುತ್ತಿಗೆದಾರರಿಗೆ ವಹಿಸಿ ಕೆಲಸ ಪೂರ್ಣಗೊಳಿಸಲಾಗಿದೆ. ಮಹಾಲೇಖಪಾಲರು ಈ ಕಾಮಗಾರಿ ನಿರ್ವಹಿಸುವಲ್ಲಿ ಹೆಚ್ಚುವರಿ ಹಣ ಪಾವತಿಯಾಗಿರುವ ಬಗ್ಗೆ ವರದಿ ನೀಡಿದ್ದಾರೆ. ಈ ಬಗ್ಗೆ ಪರಿಶೀಲಿಸಿ ಕ್ರಮ ಜರುಗಿಸಲಾಗುವುದು.

ಈ) ವರದಿಯನ್ನು ಪರಿಶೀಲಿಸಿ ಕ್ರಮ ಜರುಗಿಸಲಾಗುವುದು

ರಾಜ್ಯದಲ್ಲಿ ಡಿ.ಸಿ.ಸಿ. ಬ್ಯಾಂಕ್‌ಗಳಲ್ಲಿ ವಿವಿಧ ಹುದ್ದೆಗಳಿಗೆ ನೇಮಕಾತಿಯ ಬಗ್ಗೆ

4228 (4952) : ಶ್ರೀ ಗುರುಸ್ವಾಮಿ ಸಿ. (ಚಾಮರಾಜನಗರ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಜಿಲ್ಲಾ ಮಟ್ಟದಲ್ಲಿರುವ ಡಿ.ಸಿ.ಸಿ. ಬ್ಯಾಂಕ್‌ಗಳಲ್ಲಿ 1999 ರಿಂದ 2003ರ ಅಂತ್ಯದವರೆಗೆ ವಿವಿಧ ಹುದ್ದೆಗಳಿಗೆ ನೇಮಕಾತಿಯನ್ನು ಮಾಡಲಾಗುವುದು?

ಆ) ಮಾಡಿದ್ದರೆ, ನಿಯಮಗಳು, ವರ್ಗವಾರು ನೇಮಕಗೊಂಡಿರುವ ಹುದ್ದೆಗಳ ವಿವರವನ್ನು ಹಾಗೂ ಮೀಸಲಾತಿಯ ವಿವರಗಳನ್ನು ಜಿಲ್ಲಾವಾರು ನೀಡುವುದು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) 1999 ರಿಂದ 2003ರ ಅವಧಿಯಲ್ಲಿ (ತಹಲ್‌ವರೆಗೆ) 13 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು 659 ವಿವಿಧ ಹುದ್ದೆಗಳಿಗೆ ನೇಮಕಾತಿ ಮಾಡಿರುತ್ತವೆ (ತಃಖ್ತೆ ಲಗತ್ತಿಸಿದೆ)

ಆ) ಮೈಸೂರು ಮತ್ತು ಚಾಮರಾಜನಗರ ಡಿ.ಸಿ.ಸಿ. ಬ್ಯಾಂಕ್‌ನ್ನು ಹೊರತುಪಡಿಸಿ ಉಳಿದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು ಮೀಸಲಾತಿ ನಿಯಮಗಳನ್ನು ಪಾಲಿಸಿವೆ. ಮೈಸೂರು ಮತ್ತು ಚಾಮರಾಜ ನಗರ ಡಿ.ಸಿ.ಸಿ ಬ್ಯಾಂಕು ಗೌರವ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 7475 93ಗೆ ನೀಡಿರುವ ತೀರ್ಪಿನ ಹಿನ್ನಲೆಯಲ್ಲಿ ಮೀಸಲಾತಿ ನಿಯಮಗಳನ್ನು ಅನುಸರಿಸಿರುವುದಿಲ್ಲ. (ತಃಖ್ತೆ ಲಗತ್ತಿಸಿದೆ)